# ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ಅಧಿನಿಯಮ, 1963

**(ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ 4, 2006, ಭಾಗ – IVಎ, ಪುಟ 622 ರಿಂದ 624ರ ವರೆಗೆ ಪ್ರಕಟಿಸಲಾಗಿದೆ.)**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಂಸದೀಯ ಕಾರ್ಯದರ್ಶಿಯ ವೇತನ ಮತ್ತು ಭತ್ಯೆಗಳು
4. ಸಂಸದೀಯ ಕಾರ್ಯದರ್ಶಿಯು ಸದಸ್ಯನಂತೆ ವೇತನ ಮತ್ತು ಭತ್ಯೆಗಳನ್ನು ಪಡೆಯದಿರುವುದು
5. ಸಂಸದೀಯ ಕಾರ್ಯದರ್ಶಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು
6. ಪದದ ಮತ್ತು ರಹಸ್ಯಪಾಲನಾ ಪ್ರಮಾಣ ವಚನ
7. ಸಂಸದೀಯ ಕಾರ್ಯದರ್ಶಿಯು ವೃತ್ತಿ ನಡೆಸದಿರುವುದು, ಇತ್ಯಾದಿ
8. ನಿಯಮ ರಚನಾಧಿಕಾರ

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**1963ರ ಅಧಿನಿಯಮ 15.–** ಸಂಸದೀಯ ಕಾರ್ಯದರ್ಶಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಆ ಬಗ್ಗೆ ಕಾನೂನಿನ ರಚನೆ ಅಗತ್ಯವೆಂದು ಪರಿಗಣಿಸಲಾಗಿದೆ. ತದನುಸಾರವಾಗಿ, ಬೆಂಗಳೂರಿನಲ್ಲಿ ಉಚಿತ ಸುಸಜ್ಜಿತ ಗೃಹ ಅಥವಾ ಇದಕ್ಕೆ ಬದಲಾಗಿ ಪ್ರತಿ ತಿಂಗಳಿಗೆ 150 ರೂ. ಗಳ ಮನೆ ಬಾಡಿಗೆ ಭತ್ಯೆಯನ್ನು ನೀಡುವುದಕ್ಕಾಗಿ, ಪ್ರಯಾಣಗಳು ಮತ್ತು ತಂಗುವಿಕೆಯ ಸಂಬಂಧದಲ್ಲಿ ಪ್ರಯಾಣ ಮತ್ತು ದಿನಭತ್ಯೆಗಳ ಸಂದಾಯಕ್ಕಾಗಿ ಮತ್ತು ಉಚಿತ ವೈದ್ಯಕೀಯ ನೆರವನ್ನು ಒದಗಿಸುವುದಕ್ಕಾಗಿ ವಿಧೇಯಕದಲ್ಲಿ ಉಪಬಂಧ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ–IV 2ಸಿ, ದಿನಾಂಕ 8ನೇ ಏಪ್ರಿಲ್, 1963ರ ಸಂಖ್ಯೆ 59ರ ಪುಟಸಂಖ್ಯೆ 6 ರಲ್ಲಿ ಪ್ರಕಟಿಸಲಾಗಿದೆ.)

**II**

**1999 ರ ತಿದ್ದುಪಡಿ ಮಾಡುವ ಅಧಿನಿಯಮ 7.–** ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ಅಧಿನಿಯಮ, 1963 ರಲ್ಲಿ ಕಾರ್ಯದರ್ಶಿಯವರ ನೇಮಕಾತಿ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು, ಪದದ ಪ್ರಮಾಣ ವಚನ ಮತ್ತು ಅವರಿಗೆ ಸಂದಾಯ ಮಾಡಬೇಕಾದ ವೇತನಕ್ಕೆ ಸಂಬಂಧಿಸಿದಂತೆ ಉಪಬಂಧಗಳು ಒಳಗೊಂಡಿಲ್ಲ.

ಆದ್ದರಿಂದ ಇದರ ಏರ್ಪಾಡಿಗಾಗಿ ಸದರಿ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ, ದಿನಾಂಕ 31 ನೇ ಮಾರ್ಚ್, 1999ರ ಪುಟ 4 ರಲ್ಲಿ ಪ್ರಕಟಿಸಲಾಗಿದೆ.)

1963ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 15

(1963ರ ಏಪ್ರಿಲ್ 20 ನೇ ದಿನಾಂಕದಂದು [1][ಕರ್ನಾಟಕ ರಾಜಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ.)

# [1][ಕರ್ನಾಟಕ][1] ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ಅಧಿನಿಯಮ, 1963

(1963ರ ಏಪ್ರಿಲ್ ಹತ್ತೊಂಬತ್ತನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ.)

(1999ರ 7ನೇ ಅಧಿನಿಯಮದ ಮೂಲಕ ತಿದ್ದುಪಡಿ ಮಾಡಲಾದಂತೆ.)

ಸಂಸದೀಯ ಕಾರ್ಯದರ್ಶಿಗಳ [2][ವೇತನ, ಭತ್ಯೆಗಳು ಮತ್ತು ಇನ್ನಿತರ ಏರ್ಪಾಡು][2] ಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

[1][ಕರ್ನಾಟಕ ರಾಜ್ಯ][1]ದ ಸಂಸದೀಯ ಕಾರ್ಯದರ್ಶಿಗಳ [2][ವೇತನ, ಭತ್ಯೆಗಳು ಮತ್ತು ಇನ್ನಿತರ ಏರ್ಪಾಡು][2] ಗಳಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1999ರ ಅಧಿನಿಯಮ ಸಂಖ್ಯೆ 7ರ ಮೂಲಕ 12.3.1999 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಸಂಸದೀಯ ಕಾರ್ಯದರ್ಶಿಗಳ [2][ವೇತನ, ಭತ್ಯೆಗಳು ಮತ್ತು ಇನ್ನಿತರ ಏರ್ಪಾಡುಗಳ][2] ಅಧಿನಿಯಮ, 1963 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1999ರ ಅಧಿನಿಯಮ ಸಂಖ್ಯೆ 7ರ ಮೂಲಕ 12.3.1999 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಂಸದೀಯ ಕಾರ್ಯದರ್ಶಿ" ಎಂದರೆ, [1][ಮುಖ್ಯಮಂತ್ರಿಯವರಿಂದ][1] ಸಂಸದೀಯ ಕಾರ್ಯದರ್ಶಿಯೆಂದು ನೇಮಿತನಾದ, [2][ಕರ್ನಾಟಕ ವಿಧಾನಸಭೆಯ][2] ಅಥವಾ [2][ಕರ್ನಾಟಕ ವಿಧಾನಪರಿಷತ್ತಿನ][2] ಸದಸ್ಯ;

1. 1999ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ 12.3.1999 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

[1][(ಸಿ) XXX][1]

1. 1999ರ ಅಧಿನಿಯಮ ಸಂಖ್ಯೆ 7ರ ಮೂಲಕ 12.3.1999 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**3. ಸಂಸದೀಯ ಕಾರ್ಯದರ್ಶಿಯ ವೇತನ ಮತ್ತು ಭತ್ಯೆಗಳು.-** ಸಂಸದೀಯ ಕಾರ್ಯದರ್ಶಿಯು, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತೆ, ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956 ರ ಮೇರೆಗೆ, ಸಚಿವರು, ರಾಜ್ಯ ಸಚಿವರು ಅಥವಾ ಉಪ ಸಚಿವರಿಗೆ ಅಂಗೀಕಾರಾರ್ಹವಾದಂಥ ವೇತನಗಳು ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**4. ಸಂಸದೀಯ ಕಾರ್ಯದರ್ಶಿಯು ಸದಸ್ಯನಂತೆ ವೇತನ ಮತ್ತು ಭತ್ಯೆಗಳನ್ನು ಪಡೆಯದಿರುವುದು.–** ಸಂಸದೀಯ ಕಾರ್ಯದರ್ಶಿಯು, ತನ್ನ ಹುದ್ದೆಯ ವೇತನ ಮತ್ತು ಭತ್ಯೆಗಳನ್ನು ಪಡೆಯುವಾಗ, ವಿಧಾನಸಭಾ ಸದಸ್ಯ ಅಥವಾ ಸಂದರ್ಭಾನುಸಾರ ವಿಧಾನಪರಿಷತ್ತಿನ ಸದಸ್ಯನಂತೆ ಯಾವುದೇ ವೇತನ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**5. ಸಂಸದೀಯ ಕಾರ್ಯದರ್ಶಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು.–** ಸಂಸದೀಯ ಕಾರ್ಯದರ್ಶಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು, ಮುಖ್ಯಮಂತ್ರಿಯವರು ಅಥವಾ ಸಂಸದೀಯ ಖಾತೆಯ ಸಚಿವರು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**6. ಅಧಿಕಾರ ಪದದ ಮತ್ತು ರಹಸ್ಯಪಾಲನಾ ಪ್ರಮಾಣವಚನ.–** ಸಂಸದೀಯ ಕಾರ್ಯದರ್ಶಿಯು, ತನ್ನ ಹುದ್ದೆಗೆ ವರದಿ ಮಾಡಿಕೊಳ್ಳುವ ಮೊದಲು, ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಮೂನೆಗನುಸಾರವಾಗಿ ಮುಖ್ಯಮಂತ್ರಿಯವರು ಅಧಿಕಾರ ಪದದ ಮತ್ತು ರಹಸ್ಯ ಪಾಲನಾ ಪ್ರಮಾಣ ವಚನವನ್ನು ಬೋಧಿಸತಕ್ಕದ್ದು.][1]

1. 1999ರ ಅಧಿನಿಯಮ ಸಂಖ್ಯೆ 7ರ ಮೂಲಕ 12.3.1999 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಸಂಸದೀಯ ಕಾರ್ಯದರ್ಶಿಯು ವೃತ್ತಿ ನಡೆಸದಿರುವುದು, ಇತ್ಯಾದಿ.–** ಸಂಸದೀಯ ಕಾರ್ಯದರ್ಶಿಯು, ತನ್ನ ಅಧಿಕಾರಾವಧಿಯಲ್ಲಿ ಯಾವುದೇ ವೃತ್ತಿ ನಡೆಸತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರದಲ್ಲಿ ತೊಡಗತಕ್ಕದ್ದಲ್ಲ ಅಥವಾ ಸಂಸದೀಯ ಕಾರ್ಯದರ್ಶಿಯಾಗಿ ಮಾಡಬೇಕಾದ ತನ್ನ ಕರ್ತವ್ಯಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ಯೋಗವನ್ನು ಸಂಭಾವನೆ ಪಡೆದು ಮಾಡತಕ್ಕದ್ದಲ್ಲ.

**8. ನಿಯಮ ರಚನಾಧಿಕಾರ.–** (1) ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ [1][ಕರ್ನಾಟಕ][1] ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳು ನಿಯಮವನ್ನು ರಚಿಸಬಾರದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

The above translation of the Karnataka Parliamentary Secretaries Allowances Act, 1963 (Karnataka Act 15 of 1963) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNNER OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.